ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ರಲ್ಲಿ ಘಟಪ್ರಭಾ ಸೇತುವೆಯ ಶುಲ್ಕ ವಸೂಲಿ ಕುರಿತು

೧೨೩ (೩೧೬) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ೪ನೇ ಸಂಖ್ಯೆಯ ಪೂನಾ ಹಾಗೂ ಬೆಂಗಳೂರು ಹೆದ್ದಾರಿಯಲ್ಲಿ ಘಟಪ್ರಭಾ ಸೇತುವೆಯನ್ನು ಯಾವಾಗ ಕಟ್ಟಲಾಯಿತು ಹಾಗೂ ಅದಕ್ಕೆ ತಗುಲಿದ ವೆಚ್ಚವೆಷ್ಟು?

(ಆ) ೧೯೫೬ನೇ ಇಸವಿಯ ರಾಷ್ಟ್ರೀಯ ಹೆದ್ದಾರಿಗಳ ಶಾಸನದ ೯ನೇ ನಿಯಮದ ಮೇರೆಗೆ ಸದರಿ ಸೇತುವೆಯ ಮೂಲಕ ಹಾದು ಹೋಗುವ ವಾಹನಗಳಿಗೆ ವಾಹನ ತೆರಿಗೆ ಅಥವಾ ಸುಂಕವನ್ನು ವಸೂಲು ಮಾಡಲಾಗುತ್ತಿದೆಯೇ?

(ಇ) ಈ ಬಾಬಿನಲ್ಲಿ ಪ್ರತಿದಿನ ವಸೂಲಾಗುವ ತೆರಿಗೆ ಅಥವಾ ಸುಂಕದ ಮೊತ್ತವೆಷ್ಟು? ಹಾಗೂ ಇದುವರೆಗೆ ಈ ವಸೂಲಾತಿಯಿಂದ ಬಂದಿರುವ ಒಟ್ಟು ಮೊತ್ತವೆಷ್ಟು?

(ಈ) ಈ ತೆರಿಗೆಯನ್ನು ಎಷ್ಟು ಕಾಲ ವಿಧಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ನಾಲ್ಕನೇ ಸಂಖ್ಯೆಯ ಪೂನಾ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಘಟಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಸೇತುವೆಯು ದಿನಾಂಕ ೨೭ನೇ ಜೂನ್ ೧೯೭೭ರಂದು ಪೂರ್ಣಗೊಂಡು ವಾಹನ ಸಂಚಾರಕ್ಕೆ ತೆರವು ಮಾಡಲ್ಪಟ್ಟಿತು. ಈ ಸೇತುವೆಯ ನಿರ್ಮಾಣಕ್ಕೆ ತಗುಲಿದ ವೆಚ್ಚ (ಸೇತುವೆಯ ಕೂಡು ಹಾದಿಯ ನಿರ್ಮಾಣವೂ ಸೇರಿದಂತೆ) ರೂ. ೧,೩೨,೧೦,೮೦೩.

(ಆ) ಹೌದು. ರಾಷ್ಟ್ರೀಯ ಹೆದ್ದಾರಿ ಶಾಸನ (ತಿದ್ದುಪಡಿ) ೧೯೭೭ (೧೯೭೭ನೇ ಸಾಲಿನ ೩೦ನೇ ಶಾಸನ) ರಾಷ್ಟ್ರೀಯ ಹೆದ್ದಾರಿ (ಖಾಯಂ ಸೇತುವೆಗಳ ಉಪಯೋಗಕ್ಕೆ ವಿಧಿಸುವ ಶುಲ್ಕ) ನಿಯಮಾವಳಿ ೧೯೭೮ರ ಪ್ರಕಾರ ಸೇತುವೆ ಶುಲ್ಕವನ್ನು ಸೇತುವೆ ಮೂಲಕ ಹಾದು ಹೋಗುವ ವಾಹನಗಳಿಂದ ವಸೂಲಿ ಮಾಡಲಾಗುತ್ತಿದೆ.

(ಇ) ಈ ಬಾಬಿನಿಂದ ಪ್ರತಿದಿನ ವಸೂಲಾಗುವ ಸರಾಸರಿ ಶುಲ್ಕದ ಮೊತ್ತ ರೂ. ೧೭,೪೨೫ ದಿನಾಂಕ ೩೦ನೇ ಜೂನ್ ೧೯೮೫ರವರೆಗೆ ಒಟ್ಟು ೧,೯೨,೫೧,೩೪೭ ರೂ. ಗಳು ವಸೂಲಾಗಿದೆ.

(ಈ) ರಾಷ್ಟ್ರೀಯ ಹೆದ್ದಾರಿ ಶಾಸನ (ತಿದ್ದುಪಡಿ) ೧೯೭೭ರ ರೀತ್ಯಾ ಸೇತುವೆ ನಿರ್ಮಾಣಕ್ಕೆ ತಗಲುವ ಪೂರ್ಣ ವೆಚ್ಚ (ಸೇತುವೆಯ ಕೂಡು ಹಾದಿಯ ನಿರ್ಮಾಣವೂ ಸೇರಿದಂತೆ) ಅದರ ಮೇಲೆ ಶೇಕಡಾ ೧೮ ರಂತೆ ಬಡ್ಡಿ (ಶುಲ್ಕ ವಸೂಲಿ ಪ್ರಾರಂಭ ಮಾಡಿದ ದಿನದಿಂದ) ಶೇಕಡಾ ೧೨ ರಂತೆ ಶುಲ್ಕ ವಸೂಲಿ ಖರ್ಚು ಮತ್ತು ಸೇತುವೆ ಶುಲ್ಕ ವಸೂಲಿ ಕಟ್ಟಡದ ನಿರ್ಮಾಣದ ಖರ್ಚು ಇವೆಲ್ಲವೂ ವಸೂಲಾಗುವವರೆಗೆ ಸೇತುವೆ ಶುಲ್ಕ ವಸೂಲಿ ಮಾಡಲಾಗುವುದು. ಸದರಿ ಘಟಪ್ರಭಾ ಸೇತುವೆಯಲ್ಲಿ ಅಕ್ಟೋಬರ್ ೧೯೮೫ರ ವೇಳೆಗೆ ಪೂರ್ತಿ ಹಣ ವಸೂಲಿಯಾಗಬಹುದೆಂದು ನಿರೀಕ್ಷಿಸಲಾಗಿದೆ.

ಜಮೀನುಗಳಲ್ಲಿರುವ ಮರಗಳಿಗೆ ಅರಣ್ಯ ಇಲಾಖೆಯವರು ಮಾಲ್ಕಿ ವಸೂಲು ವಿಧಿಸುತ್ತಿರುವುದು

೧೦೪ (೬೧೨) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(೧) ೧೯೭೨ಕ್ಕೆ ಹಿಂದೆ ಸಾಗುವಳಿಗೆ ಕೊಟ್ಟಿರುವ ಜಮೀನುಗಳಲ್ಲಿರುವ ಮರಗಳಿಗೆ ಮಾಲ್ಕಿ ವನ್ನು ವಸೂಲು ಮಾಡಲು ಅರಣ್ಯ ಇಲಾಖೆಗೆ ಅಧಿಕಾರವಿದೆಯೇ?

(೨) ಹಾಗಾದರೆ, ಹಲವು ದಶಕಗಳ ಹಿಂದೆ ಅರಣ್ಯ ಇಲಾಖೆಯವರು ಮಾಲ್ಕಿ ಇಲ್ಲವೆಂದು ಮಹಜರು ಮಾಡಿ ನಂತರ ದರಖಾಸ್ತು ಮೂಲಕ ಸಾಗುವಳಿ ಚೀಟಿ ನೀಡಿದ್ದ ಜಮೀನುಗಳಲ್ಲಿ ರೈತರು ಬೆಳೆಸಿದ ಹುಣಸೇಮರಗಳನ್ನು ಅರಣ್ಯಾಧಿಕಾರಿಗಳು ಹರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(೧) ಹೌದು.

(೨) ಅಂತಹ ಪ್ರಕರಣಗಳಾವುವೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ANNOUNCEMENT

Re : Release of Sri M. S. Krishnan & Pampapathi—MLAs.

ಅಧ್ಯಕ್ಷರು.—ಕರ್ನಾಟಕ ಪೋಲೀಸ್ ಕಾಯ್ದೆಯ ೭೧ನೇ ಕಲಂನ ಮೇರೆಗೆ ದಿನಾಂಕ ೫ನೇ ಆಗಸ್ಟ್ ೧೯೮೫ರಂದು ಬಂಧಿಸಲಾದ ವಿಧಾನ ಸಭಾ ಸದಸ್ಯರುಗಳಾದ ಶ್ರೀ ಪಂಪಾಪತಿ ಹಾಗೂ ಶ್ರೀ ಎಂ. ಎಸ್. ಕೃಷ್ಣನ್ ಇವರುಗಳನ್ನು ಅದೇ ದಿನ ಸಂಜೆ ೬-೦೦ ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಬೆಂಗಳೂರು ನಗರದ ಆಲಸೂರ್ ಗೇಟ್ ವಿಭಾಗದ ಸಹಾಯಕ ಪೋಲೀಸ್ ಕಮಿಷನರ್ ರವರಿಂದ ನನಗೆ ಸಂದೇಶ ಬಂದಿದೆ.

ಶಾಸನ ರಚನಾ ಕಾರ್ಯಕಲಾಪಗಳು

೧೯೮೫ರ ಕರ್ನಾಟಕ ಆಕಸ್ಮಿಕ ನಿಧಿ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಕೃಷಿ ಮಂತ್ರಿ) (ಮುಖ್ಯ ಮಂತ್ರಿಯವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೫ರ ಕರ್ನಾಟಕ ಆಕಸ್ಮಿಕ ನಿಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ "೧೯೮೫ರ ಕರ್ನಾಟಕ ಆಕಸ್ಮಿಕ ನಿಧಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೫ರ ಕರ್ನಾಟಕ ಆಕಸ್ಮಿಕ ನಿಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

THE KARNATAKA CONTINGENCY FUND (AMENDMENT) BILL, 1985

(L.A. Bill No. 33 of 1985)

A Bill further to amend the Karnataka Contingency Fund Act, 1957.

Whereas it is expedient further to amend the Karnataka Contingency Fund Act, 1957 (Karnataka Act 11 of 1957) for the purpose hereinafter appearing ;

Be it enacted by the Karnataka State Legislature in the Thirty-sixth Year of the R public of India as follows :—

1. Short title and commencem nt.—(1) This Act may be called the Karnataka Contingency Fuud (Amendment) Act, 1985.